ದೌರ್ಜನ್ಯಕ್ಕೊಳಗಾಗಿರುವ ಹೆಣ್ಣು ಮಕ್ಕಳಿಗೆ ಪರಿಹಾರನ್ನೊದಗಿಸಬೇಕೆಂದು ತಮ್ಮನ್ನು ಈ ಮೂಲಕ ಕೇಳಿಕೊಳ್ಳುತ್ತಿದ್ದೇನೆ. ಇಲ್ಲಿ ಯಾವ ಮಂತ್ರಿಗಳೂ ಇಲ್ಲ, ಯಾರಿಗೂ ಬೇಕಾಗಿಲ್ಲ.

ಅಧ್ಯಕ್ಷರು: ಸದನದಲ್ಲಿ ಬಹಳ ಜನ ಮಂತ್ರಿಗಳು ಕುಳಿತಿದ್ದೀರಿ. ಯಾರಾದರೂ ಒಬ್ಬರು ಉತ್ತರ ಹೇಳಿ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ: (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು): ನಾನು ಈ ವಿಷಯವನ್ನು ಮಾನ್ಯ ಆರೋಗ್ಯ ಸಚಿವರ ಗಮನಕ್ಕೆ ತರುತ್ತೇನೆ. ಇಲಾಖೆಯವರ ಜೊತೆ ಮಾತನಾಡಿ ಪರಿಹಾರ ಸೂಚಿಸುವ ಪ್ರಯತ್ನ ಮಾಡುತ್ತೇನೆ.

ಶ್ರೀ ಡಿ.ಎನ್. ಜೀವರಾಜ್, ಮುಖ್ಯ ಸಚೇತಕರು:– ಮಾನ್ಯ ಆರೋಗ್ಯ ಸಚಿವರು ಕೆಳಗಡೆ ಇದ್ದು, ಈಗ ಸದನಕ್ಕೆ ಬರುತ್ತಾರೆ. ಬಂದ ಮೇಲೆ ಅವರು ನಿಮ್ಮ ಸಮಸ್ಯೆ ಬಗ್ಗೆ ಗಮನಹರಿಸುತ್ತಾರೆ.

ಉ) **ವಿಷಯ:** ಬೆಳಗಾಂ ಮತ್ತು ಖಾನಾಪುರ ಮರಾಠ ಮಾದ್ಯಮ ಖಾಸಗಿ ಶಾಲೆಗಳಲ್ಲಿ 1 ರಿಂದ 10ನೇ ತರಗತಿಗಳ ಮಕ್ಕಳಿಗೆ ಪಠ್ಯ ಪುಸ್ತಕಗಳನ್ನು ಒದಗಿಸುವ ಬಗ್ಗೆ.

SRI MANOHAR KALLAPA KINEKAR(UCHAGAON): Sri In Belgaum and Khanapur, so many Marathi schools are being run. Some of the schools are being run by private Managements In the Government Marathi School, the department has supplied text books from 1 st to 10th standard. But in the private management run schools, the students of Marathi medium are not getting the text books. the schools have started from the last two months. Till today, they are not getting the books and therefore they are losing the studies. this is happening every year. From the last three years, in every Session I am raising this question. Why the department is not making proper arrangements to get the marathi text books from 1st to 10th standard/ Sir I think , if it continues like this, marathi students will lose Interest in. their studies. So, I request Hon'ble Education Minister that immediate arrangements should be made and this should not happen repeatedly every year. that is my request Sir.

ಶ್ರೀ ಬಸವರಾಜ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ಇವತ್ತು ಏನಾಗಿದೆ ಎಂದರೆ, ನಾವು ಸರ್ಕಾರಿ ಶಾಲೆಗಳಿಗೆಲ್ಲ ಪುಸ್ತಕಗಳನ್ನು ಪೂರೈಕೆ ಮಾಡಿದ್ದೇವೆ. Private ಶಾಲೆಯವರು Book stall ಗಳ ಮುಖಾಂತರ ಖರೀದಿ ಮಾಡುತ್ತಾರೆ. ಅವರು indent ಕೊಡುತ್ತಾರೆ. ಆ indent ಕೊಟ್ಟು ಪುಸ್ತಕದ ಅಂಗಡಿಯವರು ಇವರಿಗೆ ಡಿ.ಡಿ. ಕೊಟ್ಟರೆ tender ಆದಂಥವರಿಗೆ ಇವರು ಪುಸ್ತಕವನ್ನು ಕೊಡುತ್ತಾರೆ. ಹೀಗಾಗಿ ಅವರ ಕಡೆಗೆ ಹಣ ಬಂದರೆ ಅವರು ಕೊಡುತ್ತಾರೆ. ನಾವು ಸರ್ಕಾರದ ವತಿಯಿಂದ ಎಲ್ಲಾ correct ಮಾಡಿದ್ದೇವೆ. ಈಗಾಗಲೇ ನಿನ್ನೆ ಚರ್ಚೆ ಮಾಡಿದ್ದು, ಒಂದು ವಾರದಲ್ಲಿ ಅವರಿಗೆ ಪುಸ್ತಕ ಮುದ್ರಿಸುವ ಕೆಲಸ ಮಾಡುತ್ತೇವೆ. ಈಗಾಗಲೇ ಸರ್ಕಾರಿ ಶಾಲೆ ಇದ್ದಂಥ ಕಡೆಗೆ ಕೊಟ್ಟ ಪುಸ್ತಕಗಳನ್ನು ಕೆಲವು ಕಡೆ ಅವರು ತೆಗೆದುಕೊಂಡು ಓದುವಂಥ ಕೆಲಸ ನಡೆದಿದೆ. ಅದು ನಿಂತಿಲ್ಲ. ಒಂದು ವಾರದಲ್ಲಿ, ಬರುವ ಸೋಮವಾರದೊಳಗಡೆ ಅವರಿಗೆ ಪುಸ್ತಕ ಮುಟ್ಟಿಸುವ ವ್ಯವಸ್ಥೆ ಮಾಡುತ್ತೇವೆ. ಅಂಗಡಿದಾರರು ಮತ್ತು ಪುಸ್ತಕ ಪ್ರಿಂಟ್ ಮಾಡುವ ನಡುವೆ ಇರುವಂಥದ್ದು ಇದು. ನಮ್ಮದಲ್ಲ. ಆದರೂ ಸಹ ಸರ್ಕಾರದ ಜವಾಬ್ದಾರಿ ಇದೆ. ಇದನ್ನು ಮಾಡಿಕೊಡುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಮನೋಹರ ಕಲ್ಲಪ್ಪ ಕಿಣೇಕರ್: The printing press is not making the printing. that is the problem raised.

ಶ್ರೀ ಬಸವರಾಜ ಎಸ್. ಹೊರಟ್ಟಿ: Direction ಕೊಟ್ಟಿದ್ದೇವೆ. ಯಾರು ಮುದ್ರಣ ಮಾಡುತ್ತಾರೆ, ಅವರಿಗೆ ತಕ್ಷಣ ಕೊಡಬೇಕೆಂದು Direction ಕೊಟ್ಟಿದ್ದೇವೆ. ಯಾರು ಹಣ ಕೊಡುತ್ತಾರೋ ಅವರಿಗೆ ತಕ್ಷಣ ಪುಸ್ತಕಗಳನ್ನು ಮುಟ್ಟಿಸಬೇಕೆಂದು Direction ಹೋಗಿದೆ. ನಾನು Monday, Tuesday ಒಳಗಡೆ ವ್ಯವಸ್ಥೆ ಮಾಡಿಸುವಂಥ ಕೆಲಸ ಮಾಡಿಸುತ್ತೇನೆ.

ಊ) ವಿಷಯ: ಶರಣ ಬಸವೇಶ್ವರ ವಿದ್ಯಾಪೀಠ ಸಂಸ್ಥೆಗೆ ಸಿಬ್ಬಂದಿಯನ್ನು ಭರ್ತಿ ಮಾಡಲು ಅನುಮತಿ ನೀಡುವ ಬಗ್ಗೆ.

ಶ್ರೀ ಎಸ್. ಎಸ್. ಪಾಟೀಲ್ (ಮುಂಡರಗಿ): ಮಾನ್ಯ ಅಧ್ಯಕ್ಷರೆ, ಶರಣ ಬಸವೇಶ್ವರ ವಿದ್ಯಾಪೀಠದವರು ಹೊಸದಾಗಿ staff ತುಂಬಲು permission ಕೇಳಿದ್ದಾರೆ. ಇದುವರೆಗೂ ನಿಮ್ಮವರು ಅದಕ್ಕೆ permission ಕೊಡುತ್ತಿಲ್ಲ. ಏಕೆ delay ಮಾಡುತ್ತಿದಾರೆಂದು ಹೇಳಬೇಕು.

ಶ್ರೀ ಬಸವರಾಜ ಎಸ್. ಹೊರಟ್ಟಿ: staff ಅನ್ನು ತುಂಬಲಿಕ್ಕೆ permission ಕೊಟ್ಟಿದ್ದೇವೆ. ಮೇ–2006ರವೆಗೆ ಇರುವ ಖಾಲಿ ಜಾಗ ತುಂಬಲಿಕ್ಕೆ ಆರ್ಥಿಕ ಇಲಾಖೆಯವರು ಅನುಮತಿ